


ಗುರುವಿನ ಇಚ್ಛೆಗೆ ತಕ್ಕಂತೆ ಒಬ್ಬ ಗಟ್ಟಿ ಸಂಗೀತಗಾರ ತಯಾರಾಗುವುದು. ಚಿಲ್ಲಾ ಅವಧಿಯಲ್ಲಿ ತಾಲೀಮಿಗೆ ಕಾಲಮಿತಿಯಿಲ್ಲ. ದಿನಕ್ಕೆ ಹದಿನಾರು ಘಂಟೆಯೂ ಆಗಬಹುದು. ಇಪ್ಪತ್ತು ಘಂಟೆಯೂ ದಾಟಬಹುದು. ಅದು ರಾಕ್ಷಸೀ ಸಾಧನೆಯ ಕಾಲ. ಗುರು ಎಲ್ಲ ಶಿಷ್ಯರಿಗೂ ಚಿಲ್ಲಾ ಮಾಡಲು ಹೇಳುವುದಿಲ್ಲ. ಹಾಗೆ ಹೇಳಿ ಪ್ರಯೋಜನವೂ ಇಲ್ಲ. ಪ್ರತಿಭೆ ಇಲ್ಲದೇ ಇಪ್ಪತ್ತನಾಲ್ಕು ತಾಸು ಅಭ್ಯಾಸ ಮಾಡಿಯೂ ದೊಡ್ಡ ಬದಲಾವಣೆಯಾಗದು. ಚಿಲ್ಲಾದ ಅವಧಿಯಲ್ಲಿ ಸೇವಿಸಬೇಕಾದ ಅಲ್ಪ ಆಹಾರವನ್ನು ಗುರುವೇ ತಂದು ಕೊಡುತ್ತಾರೆ ಅಥವಾ ವ್ಯವಸ್ಥೆ ಮಾಡುತ್ತಾರೆ. ದೇಹಕ್ಕೆ ಆಲಸ್ಯ ಮತ್ತು ಮಿದುಳಿಗೆ ಮಂದತೆ ಬರದಂಥ ಆಹಾರವಷ್ಟೇ ಸೇವನೆಗೆ ಯೋಗ್ಯ. ಹಾಡುವುದು ಕೊರಳಿನಿಂದ ಎನ್ನುವುದು ನಿಜವಾದರೂ ನಮ್ಮ ಇಡೀ ದೇಹ ಒಂದು ಸಂಗೀತ ಉಪಕರಣವಿದ್ದಂತೆ. ದೇಹವು ದಂಡಿಸಲ್ಪಡಬೇಕು. ಕಂಠ ಮಾತ್ರವಲ್ಲ ಇಡೀ ದೇಹವನ್ನು ಶ್ರುತಿಗೆ ತರಬೇಕು. ಆಗ ಮಾತ್ರ ಮನಸ್ಸು ಕಲ್ಪಿಸಿದ್ದು ಮಿದುಳು ನಿರ್ದೇಶಿಸಿದ್ದು ಗಂಟಲಲ್ಲಿ ಬಂದೀತು. ಒಂದು ಮಂಡಲಕಾಲ ಆ ಕೊಠಡಿಯಲ್ಲಿ ನಡೆಯುವ ಅಖಂಡ ತಪಸ್ಸು! ನಿದ್ರೆಯ ಅಮಲು, ಚುರುಗುಡುವ ಹೊಟ್ಟೆ, ಆಯಾಸಗಳನ್ನೆಲ್ಲ ಓಟದಲ್ಲಿ ಹಿಂದಿಕ್ಕಿ ಸ್ವರ ಸಾಧನೆಯ ವಾಂಛೆಯು ಮುಂದೆ ಓಡಿ ಗೆಲ್ಲಬೇಕು. ಆ ಅವಧಿಯು ಸೃಷ್ಟಿಸುವ ವಿಭ್ರಮೆ, ಆಯಾಸ, ನೋವು ಮತ್ತು ಉನ್ಮಾದವು ವಿಶಿಷ್ಟ ಶಕ್ತಿ